

■ ಅನು ಬೆಳ್ಳೆ

# ಕಿರಣನತ್ತ ಮೇನಕಾ ನೋಟ

ಕಾಶಮ್ಮನ ದೂರದ ಸಂಬಂಧಿಯ ಬಗ್ಗೆ ತಿಳಿದುಕೊಂಡ ಕಿರಣನ ಸಂಶಯವಿನ್ನೂ ದೂರವಾಗಲಿಲ್ಲ. ಕಾಶಮ್ಮನ ಪ್ರಕಾರ ದೂರದ ಸಂಬಂಧಿ ಮೇನಕಾಗೆ ಸಂಬಂಧಪಟ್ಟವನು! ಯಾವ ರೀತಿಯಲ್ಲಿ ಸಂಬಂಧಿ? ಅವನಿಗೆ ಮೇನಕಾದ ಆಸ್ತಿಯ ಮೇಲೆ ಪಾಲು ಇದೆಯೇ? ಪದೇ ಪದೇ ಕಾಶಮ್ಮನೂ ಅವನಿಗೆ ಫೋನ್ ಮಾಡಿ ವಿಷಯ ತಿಳಿಸುತ್ತಿರುವುದೇತಕೆ? ಲಹರಿಯ ಕಣ್ಮರೆಯಲ್ಲಿ ಅವನ ಪಾತ್ರವೇನು? ಇವನ್ನೆಲ್ಲಾ ಕಂಡು ಹಿಡಿಯಲು ಸಾಧ್ಯವೇ? ಮೇನಕಾಳ ಜೊತೆಗೆ ನೇರವಾಗಿ ಸವಾಲು ಎಸೆದಿದ್ದ ಕಿರಣನಿಗೆ ಕಾಕುಟ್ಟನಂತಹ ನಿಗೂಢ ವ್ಯಕ್ತಿಯನ್ನು ಎದುರಿಸುವ ಅನಿವಾರ್ಯತೆ, ಬರೆಯುವ ಮಹಾಗದ್ಯಕ್ಕೆ ಮುನ್ನುಡಿಯಂತೆ! ಆ ಮುನ್ನುಡಿಯನ್ನು ಬರೆಯಲು ಕಾಶಮ್ಮನ ಸಹಾಯಹಸ್ತ ಬೇಕು. ಕಾಕುಟ್ಟನ ಬಗ್ಗೆ ಎಲ್ಲವನ್ನೂ ಹೇಳಬಲ್ಲವಳೆಂದರೆ ಕಾಶಮ್ಮ ಮಾತ್ರ.

ಕಾಕುಟ್ಟನ ಚಲನವಲನ, ವ್ಯಕ್ತಿತ್ವ ಅರಿತುಕೊಂಡರೆ ಯುದ್ಧರಂಗದಲ್ಲಿ ಅವನನ್ನು ಎದುರಿಸುವುದು ಸುಲಭ.

‘ಕಾಶಮ್ಮ, ನಿಮ್ಮ ಹತ್ತಿರದ ಸಂಬಂಧಿಯ ಬಗ್ಗೆ ಹೇಳಿದರಲ್ಲವೆ? ಅವನ ಬಗ್ಗೆ ನೀವು ಮತ್ತೇನನ್ನೂ ಹೇಳಿಲ್ಲ. ಈ ಮನೆಗೆ ಆತ ಹೇಗೆ ಸಂಬಂಧಿ?’ ಆಕ್ಷೇಪಣೆಯಿರಲಿಲ್ಲ ಮಾತಿನಲ್ಲಿ.

‘ಅವ್ನು ನನ್ನ ಹಿತೈಷಿ...’ ಮಾತು ತಕ್ಷಣ ನಿಂತಿತು.

ದೂರದ ಸಂಬಂಧಿ ಕಾಶಮ್ಮನ ಹಿತೈಷಿ! ಕಿರಣನ ಕಣ್ಣ ರೆಪ್ಪೆಗಳು ಇನ್ನಷ್ಟು ದೂರಕ್ಕೆ ಸರಿದವು. ಹಿತೈಷಿ ಮತ್ತು ಸಂಬಂಧಿಯ ನಡುವೆ ವ್ಯತ್ಯಾಸ ತಿಳಿಯ ಮುಗ್ಧೆ ಕಾಶಮ್ಮ!

ವಿಷಯ ಮತ್ತಷ್ಟು ಗೊಂದಲ ಸೃಷ್ಟಿಸಿತು ಕಿರಣನ ಮೆದುಳಿನಲ್ಲಿ. ಸಂದೇಹಕ್ಕೆ ದಾರಿಯೂ ಅದೇ ಆಗಿತ್ತು. ಕಿರಣ ಮಾತಾಡದೆ ಸುಮ್ಮನೆ ಕುಳಿತ.

‘ಅವ್ನು ನನ್ನ ಹಿತೈಷಿ. ಈ ಮನೆಗೆ ನಾನು ಸೊಸೆಯಾಗಿ ಬಂದಾಗ ನನ್ನ ಹಿಂದೆ ಕುರುಂಟು ಬಂದ ಹುಡುಗ’ ಕಿರಣ ಆಶ್ಚರ್ಯ ತೋರಿಸಿದ. ಅವನ ಮುಖ ಓದಿಕೊಂಡ ಕಾಶಮ್ಮ ಒಣ ನಗೆ ನಕ್ಕರು.

‘ನಿಂಗೆ ಕುರುಂಟು ಅಂದ್ರೆ ಏನೂಂತ ಗೊತ್ತಿಲ್ಲ ಅನ್ಸುತ್ತೆ. ಮದುವೆಯಾದ ಹೆಣ್ಣನ್ನು ಗಂಡನ ಮನೆಗೆ ಕಳುಹಿಸುವಾಗ ಸಣ್ಣ ಹುಡುಗಿಯೋ ಹುಡುಗನನ್ನೋ ಕಳುಹಿಸುವ ಸಂಪ್ರದಾಯವಿದೆ. ಹಾಗೆ ನನ್ನ ಜೊತೆಗೆ ಬಂದ ಹುಡುಗ ಅವನು. ಆಗ ಅವನಿಗೆ ಸುಮಾರು ಹತ್ತು ಹನ್ನೆರಡು ವರ್ಷ ಪ್ರಾಯ’.

‘ಅಷ್ಟು ದೊಡ್ಡ ಹುಡುಗ ನಿಮ್ಮ ಜೊತೆಗೆ ಬಂದವನೇ?’

‘ಹೌದು, ನನಗೆ ಹತ್ತಿರದ ಸಂಬಂಧಿಯೆಂದರೆ ಆ ಹುಡುಗನ ಮನೆಯವರು. ನನ್ನ ಜೊತೆಗೆ ಬರಲು ಸಿದ್ಧನಿದ್ದ ಹುಡುಗ ಅವನೊಬ್ಬನೆ’

‘ಆ ಹುಡುಗನ ಹೆಸರೇನೆಂದಿರಿ?’

‘ಈಗ ಅವನು ಬೆಳೆದು ದೊಡ್ಡವನಾಗಿದ್ದಾನೆ. ಕಾಕುಟ್ಟ ಅಂತ ಅವನ ಹೆಸರು. ಇಲ್ಲಿಗೆ ಬಂದ ಹುಡುಗನನ್ನು ಮೆಚ್ಚಿ ನಮ್ಮವರು ಅವನನ್ನು ಇಲ್ಲಿಯೇ ಇರಿಸೋ ಇಚ್ಛೆ ತೋರಿಸಿದ್ರು. ಆಗ ಮೇನಕಾಗೆ ಸಣ್ಣ ವಯಸ್ಸು. ಹುಡುಗ ಅತೀ ಚುರುಕು, ಬುದ್ಧಿವಂತ. ಹೇಳಿದ ಕೆಲಸ ತಕ್ಷಣ ಮಾಡಿ ಮುಗಿಸ್ತಿದ್ದ. ಹಾಗಾಗಿ ಸ್ವಲ್ಪ ದಿನದಲ್ಲಿಯೇ ಯಜಮಾನರ ಮೆಚ್ಚುಗೆ ಗಳಿಸಿದ. ಮುಂದೆ ಶಾಲೆಗೆ ಹೋಗಲಾರದೆ ಇಲ್ಲಿಯೇ ತೋಟದ